ತಗಂಡು ತಿಕ್ಯ' ಎಂದಳು. ಕೆಂಪನಿಗೆ ಅದನ್ನು ನೋಡಿ ಆಶ್ಚರ್ಯವಾಯಿತು. ಇರಲಿ ಇದನ್ನೂ ನೋಡಿ ಬಿಡೋಣ ಎಂದು, ಅದರ ಉಪಯೋಗ ತಿಳಿಯದ ಕೆಂಪ ಮುಳ್ಳಿನಂತಿದ್ದ ಅದರ ಭಾಗಕ್ಕೆ ಸೋಪನ್ನ ಸವರಿ ಎಡಗೈಲು ಬಲಗೈಲು ಬೆನ್ನಿಗೆ ಅಡ್ಡವಾಗಿ ಬರುವಂತೆ ಹಿಂದಮಕ್ಕೆ ಹಿಡಿದುಕೊಂಡು, ಮೇಲೂ ಕೆಳಗೂ ಎಳೆಯ ತೊಡಗಿದ. ಬೆಲ್ಟಿನ ಮುಳ್ಳುಗಳಿಗೆ ನಡುಬೆನ್ನು ಸಿಕ್ಕಿತಾದರೂ ಪೂರ ಬಲ ಬೀಳದೆ ಮೇಲು ಮೇಲೆ ಸವರಿದಂತಾಯಿತಷ್ಟೆ. ಇದರಿಂದ ಅಷ್ಟೇನು ಸಂತುಷ್ಟನಾಗದ ಕೆಂಪ ಶಾಸ್ತ್ರ ಮುಗಿಸಿಕೊಂಡು ಆಚೆಬಂದ.

ಹೆಂಡತಿ ಅಡುಗೆ ಮನೆಯಿಂದಲೇ ಇತ್ತಗೊಂದು ಕಣ್ಣು ಮಡಗಿದ್ದಳು. ಕೆಂಪನ ಮುಖಭಾವವೆ ಅವಳಿಗೆ ಎಲ್ಲವನ್ನೂ ಹೇಳಿತು. ಅಷ್ಟೇನು ಗಮನ ಕೊಡದೆ ಕೆಂಪ ಆಫೀಸ್‌ಗೆ ಹೋದ. ಅತ್ತ ಹದಿನೈದು ದಿನ ಬಿಟ್ಟು ಮಾಲತಿ ಬೆನ್ನುಜ್ಜುವ ಇನ್ನೊಂದು ವಸ್ತುವನ್ನು ಅದೆಲ್ಲಿಂದಲೋ ತಂದು ಬಚ್ಚಲಿಗೆ ಇಟ್ಟಿದ್ದಳು. ಅದು ಉದ್ದಕ್ಕೆ ಪ್ಲಾಸ್ಟಿಕ್ ಕೈನಂತಿದ್ದು, ಮುಂತುದಿಗಳು ಮುಂದಕ್ಕೆ ಕೆರೆಯುವಂತೆ ಬಾಗಿದ್ದವು. ಮೊದಲು ಅದನ್ನು ನೋಡಿದ ಕೆಂಪ ಎಲ್ಲೊ ನೀರೋಗುವ ಜಾಗದಲ್ಲಿ ಸತ್ತೆ ಕಟ್ಟಿಕೊಂಡಿದ್ದರೆ ತೆಗೆಯಲು ಬಳಸುವುದಿರಬೇಕೆಂದುಕೊಂಡನು. ಆದರೆ, ಒಂದು ದಿನ ಮಾಲತಿಯೇ ಬಚ್ಚಲಿಗೆ ಬಂದು ಅದರ ಉಪಯೋಗವನ್ನು ಪ್ರಯೋಗಾರ್ಥವಾಗಿ ತೋರಿಸಿಕೊಟ್ಟಳು.

ಕೃತಕ ಕೈ ಹಾಗು ಬೆಲ್ಟಿನಿಂದ ತಾನೇ ತನ್ನ ಬೆನ್ನುಜ್ಜಿಕೊಳ್ಳಲು ಮಾಡಿದ ಯತ್ನವೆಲ್ಲ ವಿಫಲವಾದಂತಾಗಿ ಪೂರ್ಣ ತೃಪ್ತಿ ಎಂಬುದು ದೂರವೇ ಉಳಿಯಿತು. ಈ ಮಧ್ಯೆ ಆಫೀಸ್‌ನಲ್ಲಿ ಕೆಲಸ ಮಾಡುವಾಗ ಬೆನ್ನು ಕಡಿತ ಬಂದಂತಾಗುವುದು, ಆಗ ತಾನು ಒರೆಗಿದ್ದ ಗೋಡೆಗೇ ಒಂದೆರೆಡು ಬಾರಿ ತಿಕ್ಕಿಕೊಳ್ಳುವುದು, ಬರೆಯಲು ಬಳಸುವ ಪೆನ್‌ಅನ್ನೆ ಕೊಳಪಟ್ಟಿ ಇಂದ ಒಳ ತೂರಿಸಿ ಕೆರೆದುಕೊಳ್ಳುವುದು ಇತ್ಯಾದಿ ಮಾಡತೊಡಗಿದ. ಇದೆಲ್ಲ ಆಡಿದ ಆಟವಲ್ಲ ಎಂದು ಇನ್ನೊಂದು ದಿನ ಹೆಂಡತಿಯನ್ನು ಬಚ್ಚಲಿಗೆ ಕರೆದ. 'ಪಕ್ಕದಮನೆ ಆಂಟಿ ಅರ್ಜೆಂಟ್ ಯಾಕೊ ಕರಿತಿದೆ' ಎಂದು ಮಾಲತಿ ಆಚೆ ಹೋದಳು. ಇದು ವರ್ಕೌಟ್ ಆದಂಗಾಗಿ ಕೆಂಪ ಯಾವಾಗಲೇ ಸ್ನಾನಕ್ಕೆ ಕೂರಲಿ ಉಪಾಯವಾಗಿ ಮನೆಯಿಂದ ಆಚೆ ಹೋಗುವುದು, ಮನೆಯೊಳಗಿಲ್ಲ ಎನಿಸಿಕೊಳ್ಳುವುದು ಮಾಲತಿಯ ನೆರವಿಗೆ ಬರತೊಡಗಿತು. ಇದರಿಂದ ಬೇಸತ್ತ ಕೆಂಪ ಬಚ್ಚಲು ಮನೆಯೊಳಗಿರುವ ಬೆನ್ನುಜ್ಜುವ ಕೃತಕ ಉಪಕರಣಗಳ ಮೇಲೆ ಬೇಸರಿಸಿಕೊಳ್ಳತೊಡಗಿದ. ಬಚ್ಚಲು ಮನೆಯಿಂದ ಶುರುವಾಗುತ್ತಿದ್ದ ಬೇಸರದ ಮೊಳಕೆ ಬೆಡ್ರೂಮಿನಲ್ಲು ಚಿಗಿತು ಕೆಲವೊಮ್ಮೆ ಅತ್ತೊಂದು ಮುಖ ಇತ್ತೊಂದು ಮುಖವಾಗತೊಡಗಿತು.

ಈ ಉಜ್ಗಲ್ಲು ಇರೋದ್ರಿಂದ ತಾನೆ ಗಂಡ ಬೆನ್ನುಜಕೆ ಕರ್‍ಯೋದು ಮತ್ತು ಇಷ್ಟೆಲ್ಲ ಮನಸ್ತಾಪಗಳಿಗೆ ಕಾರಣವಾಗಿರೋದು ಎಂದು ಅದೆ ಇಲ್ಲವಾದರೆ ಎಲ್ಲ ಸರಿಯಾಗುತ್ತೆ ಎಂದು ಭಾವಿಸಿ ಒಂದು ದಿನ ಮನೆ ಕ್ಲೀನ್ ಮಾಡುವಾಗ ಮಾಲತಿ ಅದನ್ನ ಇಲ್ಲವಾಗಿಸಿದಳು. ಉಜ್ಗಲ್ಲು ಇಲ್ಲದಿರುವುದು ಕೆಂಪನಿಗೆ ಬೇಗ ಪತ್ತೆಯಾಗಿ 'ಲೇ ಇವ್ಳೆ ಎಲ್ಲೆ ಇಲ್ಲಿದ್ದ ಉಜ್ಗಲ್ ಕಾಣುಸ್ತಿಲ್ಲ' ಎಂದು ಬಚ್ಚಲು ಮನೆಯಿಂದಲೇ ಕಿರುಚಿದ. ಹೆದರಿದ ಮಾಲತಿ 'ನಂಗೊತ್ತಿಲ್ಲಪ್ಪ' ಎಂದಳು. 'ನಿಮ್ಮವುನ್ ಬೋಸುಡಿನಾಕ್ಯಾಯ, ಗಂಡುನ ಬೆನ್ನುಜಕೆ ಯೋಗ್ಯತೆ ಇಲ್ಲ ಅಂದ್ರು, ನಮ್ಮನೆ ದೇವ್ರುನ್ನ ಇಲ್ದಂಗೆ ಮಾಡಿದಿಯ, ಎಷ್ಟೆ ಕೊಬ್ಬು ನಿನ್ಗೆ' ಎಂದು ಬಚ್ಲೊಳಗೆ ಹೆಂಗಿದ್ನೊ ಅಂಗೆ ಆಚಿಕೆ ಬಂದು ಕೆಂಡ ಮಂಡಲನಾದ. ಗಂಡನ ರುದ್ರಾವತಾರವನ್ನ ನೋಡಿ ಮಾಲತಿ ಅಳುತ್ತ ಬೆಡ್ ರೂಮ್ ಪಾಲಾದಳು. ತಿಂಡಿ ತೀರ್ಥ ಎಲ್ಲ ಬಿಟ್ಟು ಅವತ್ತು ಕೆಂಪ ಆಫೀಸ್‌ಗೆ ಹೋದನು. ಕೋಪವೆಲ್ಲ ತೀರಿದಮೇಲೆ ಮಧ್ಯಾಹ್ನಕ್ಕೆ ವಾಟ್ಸಾಪ್‌ನಲ್ಲಿ ಮೆಸೇಜ್ ಹಾಕಿದರೂ ಹೆಂಡತಿಯಿಂದ ಯಾವುದೇ ರೆಸ್ಪಾನ್ಸ್ ಇಲ್ಲ. ಸಂಜೆಗೆ ಮನೆಗೆ ಬಂದು ನೋಡಿದರೆ ಮನೆ ಕೀನ ಓನರ್ ಆಂಟಿ ತಂದು ಕೆಂಪನ ಕೈಲಿ ಕೊಟ್ಟಳು. ಒಳ ಹೊಕ್ಕು ನೋಡಿದರೆ ಕೆಂಪನ ಮುದ್ದಾದ ಹೆಂಡ್ತಿ ಗಂಟು ಮೂಟೆ ಕಟ್ಟಿ ಎದ್ದಿದ್ದಳು.

ದಿಗಿಲುಬಿದ್ದ ಕೆಂಪ ಅವಳಿಗಾಗಿ ಬೀದಿ ಬೀದಿ ಅಲೆದ. ಯಾರಿಗೆ ಏನು ಉತ್ತರ ಹೇಳುವುದು ಎಂದು ಚಡಪಡಿಸಿದ. ಎಲ್ಲಾದರೂ ಏನಾದರೂ ಬರೆದಿಟ್ಟು ಹೋಗಿದ್ದಾಳ ಎಂದು ಆಮೂಲೆ ಈ ಮೂಲೆಯನ್ನೆಲ್ಲ ತಡಕಿದ. ಇದೇ ಆತಂಕದಲ್ಲಿ ಒಂದು ರಾತ್ರಿ ದೂಕಿದ.